# ನಿವೇದನೆ

## ಹಾಸ್ಯವೂ, ಅಪಹಾಸ್ಯವೂ..

ಓದುವುದು ಹೆಚ್ಚು ಶ್ರಮವನ್ನು ಬೇಡುತ್ತದೆ! ನೋಡುವುದಕ್ಕೆ ಕುಳಿತುಕೊಳ್ಳುವುದೂ ಬೇಕಿಲ್ಲ; ನಿಂತು ಅಥವಾ ಮಲಗಿಯೂ ನೋಡಬಹುದು! 'ಕಡಿಮೆ ಶ್ರಮ, ಹೆಚ್ಚು ಮಜಾ' ಎನ್ನುವುದು ಈಗಿನ ಕಾಲಮಾನದ ಜಪವೂ ಹೌದು. ಓದುವ ಅಭ್ಯಾಸಕ್ಕಿಂತ ಕೇಳುವ ಸುಖವೇ ಹೆಚ್ಚು ಎನ್ನುವ ನಿರ್ಣಯಕ್ಕೆ ಜನರು ಬಂದಿರುವಂತೆ ಕಾಣುತ್ತದೆ!

ಒತ್ತಡದ ಜೀವನ ಜನರಲ್ಲಿ ಹಲವಾರು ರೋಗರುಜಿನಗಳನ್ನು ಹುಟ್ಟುಹಾಕುತ್ತಿದೆ. ಏರು ರಕ್ತದೊತ್ತಡ ಮತ್ತು ಮಧುಮೇಹವಂತೂ ಈಗ ಎಲ್ಲರಲ್ಲಿ ಸಾಮಾನ್ಯ ಎಂಬಂತಾಗಿದೆ. ಜೀವನಶೈಲಿಯನ್ನು ಬದಲಾಯಿಸಿಕೊಳ್ಳುವುದೇ ಈ ಎರಡು ಕಿರಿಕಿರಿಗಳನ್ನು ಎದುರಿಸಲು ಸುಲಭ ಉಪಾಯ ಎನ್ನುವುದು ಎಲ್ಲ ವೈದ್ಯರೂ ಹೇಳುವ ಮಾತು. ಪ್ರತಿದಿನ ನಡೆಯುವುದು, ಸಮಯಕ್ಕೆ ಸರಿಯಾಗಿ ಊಟ ಮಾಡುವುದು, ಮನಸ್ಸಿಗೆ ಹಿತವಾದ ಸಂಗೀತ ಕೇಳುವುದು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಹೆಚ್ಚು ಟೆನ್ಶನ್ ಮಾಡಿಕೊಳ್ಳದೆ ನಗು ನಗುತ್ತಾ ಬಾಳುವುದು– ವೈದ್ಯರು ಹೇಳುವ ಸುಲಭ ದಾರಿಗಳು. ಹಾಸ್ಯಪ್ರಜ್ಞೆ ಇರುವವರನ್ನು ಸಣ್ಣಪುಟ್ಟ ಯಾವ ಒತ್ತಡಗಳೂ ಬಾಧಿಸುವುದಿಲ್ಲ ಎನ್ನುವುದು ನಿಜ.

ಕನ್ನಡದಲ್ಲಿ ಹಾಸ್ಯ ಸಾಹಿತ್ಯಕ್ಕೆ ಇರುವ ಪೂರ್ವಪರಂಪರೆಯೂ ದೊಡ್ಡದೇ. ರಾಶಿ, ಗೋರೂರು, ಕೈಲಾಸಂ, ಬೀಚಿ, ಲಾಂಗೂಲಾಚಾರ್ಯ, ಟಿ.ಸುನಂದಮ್ಮ, ನುಗ್ಗೇಹಳ್ಳಿ ಪಂಕಜ, ಕೇಫ, ಅರಾಸೇ ಮುಂತಾದ ಪೂರ್ವಸೂರಿಗಳು ಹಾಕಿಕೊಟ್ಟ ಪರಂಪರೆಯ ದಾರಿಯಲ್ಲಿ ಆ ಬಳಿಕದ ಹಾಸ್ಯ ಸಾಹಿತಿಗಳೂ ಸಾಕಷ್ಟು ಕೃಷಿ ಮಾಡಿದ್ದಾರೆ. ಎಂ.ಎಸ್.ನರಸಿಂಹಮೂರ್ತಿಯವರ ಸಮಕಾಲೀನರಲ್ಲೂ ಹಲವು ಹಾಸ್ಯಸಾಹಿತಿಗಳ ದೊಡ್ಡ ಪಟ್ಟಿ ಮಾಡಬಹುದು. ಆದರೆ ಅಲ್ಲಿಂದೀಚೆಗೆ ರಾಜಕೀಯದವರನ್ನು ಲೇವಡಿ ಮಾಡುವುದೇ ಹಾಸ್ಯಸಾಹಿತ್ಯದ ಒಂದು ದೊಡ್ಡ ಕವಲಾಗಿ ಬೆಳೆಯಿತು. ಟ್ಯಾಬ್ಲಾಯ್ಡ್ ಪತ್ರಿಕೆಗಳಲ್ಲಿ ಅದೇ ದೊಡ್ಡ ಆಕರ್ಷಣೆಯೂ ಆಯಿತು. ಕೆಲವೇ ವರ್ಷಗಳಲ್ಲಿ ಇಂತಹ ಹಾಸ್ಯಬರಹಗಳ ಮಿತಿಯೂ ಗೊತ್ತಾಗಿ ಅದರ ಪ್ರಮಾಣವೂ ಕಡಿಮೆಯಾಯಿತು. ಕ್ರಮೇಣ ಹಾಸ್ಯ ಲೇಖನಗಳನ್ನು ಬರೆಯುವವರ ಸಂಖ್ಯೆ ಕಡಿಮೆಯಾಗಿ ಹಾಸ್ಯದ ಷೋ ಗಳನ್ನು ಕೊಡುವವರ ಸಂಖ್ಯೆ ಬೆಳೆಯಿತು. ಇವತ್ತು ಹಾಸ್ಯಬರಹಗಳ ಸಂಕಲನಗಳಿಗೆ ಮಾರುಕಟ್ಟೆ ದುರ್ಬಲವಾಗಿದೆ. ಅದೇ ಹಾಸ್ಯೋತ್ಸವಗಳಿದ್ದರೆ ಜನ ಕಿಕ್ಕಿರಿದು ಸೇರುತ್ತಾರೆ. ಟೀವಿ ಗಳಲ್ಲೂ ಹಾಸ್ಯೋತ್ಸವದ ಪ್ರಸಾರವಿದ್ದರೆ ವೀಕ್ಷಕರ ಸಂಖ್ಯೆ ಹೆಚ್ಚಿರುತ್ತದೆ. ಓದುವ ಅಭ್ಯಾಸಕ್ಕಿಂತ ಕೇಳುವ ಸುಖವೇ ಹೆಚ್ಚು ಎನ್ನುವ ನಿರ್ಣಯಕ್ಕೆ ಜನರು ಬಂದಿರುವಂತೆ ಕಾಣುತ್ತದೆ! ಓದುವುದು ಹೆಚ್ಚು ಶ್ರಮವನ್ನು ಬೇಡುತ್ತದೆ! ನೋಡುವುದಕ್ಕೆ ಕುಳಿತುಕೊಳ್ಳುವುದೂ ಬೇಕಿಲ್ಲ; ನಿಂತು ಅಥವಾ ಮಲಗಿಯೂ ನೋಡಬಹುದು! 'ಕಡಿಮೆ ಶ್ರಮ, ಹೆಚ್ಚು ಮಜಾ' ಎನ್ನುವುದು ಈಗಿನ ಕಾಲಮಾನದ ಜಪವೂ ಹೌದು.

ಕನ್ನಡ ಸಿನಿಮಾಗಳಲ್ಲಿ ನರಸಿಂಹರಾಜು ಅವರ ಕಾಲದಲ್ಲಿ ಇದ್ದ ಹಾಸ್ಯಕ್ಕೂ ಈಗಿನ ಹಾಸ್ಯದೃಶ್ಯಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಆಗ ಸಿನಿಮಾದಲ್ಲಿ ಸಾಹಿತ್ಯಕ್ಕೆ ಪ್ರಮುಖ ಸ್ಥಾನವಿತ್ತು. ಹಾಗಾಗಿ ಹಾಸ್ಯದೃಶ್ಯಗಳು ಮುಖ್ಯ ಚಿತ್ರಕಥೆಗೆ ಪೂರಕವಾಗಿಯೇ ಇರುತ್ತಿದ್ದವು. ಸದಭಿರುಚಿಯ ಹಾಸ್ಯ ಸಂಭಾಷಣೆಗಳು ಪ್ರೇಕ್ಷಕರಿಗೆ ಕಚಗುಳಿ ಇಡುತ್ತಿದ್ದವು. ತಂತ್ರಜ್ಞಾನ ಬೆಳೆದಂತೆ ಕ್ಯಾಮೆರಾಗಳ ಪಾತ್ರವೇ ಮುಖ್ಯವಾಗಿ, ಸಂಭಾಷಣೆಗಿಂತ ದೃಶ್ಯವೈಭವವೇ ಮೆರೆಯಿತು. ಕ್ರಮೇಣ ಕಥೆಗಳಲ್ಲಿ ಹಾಸ್ಯ ಪಾತ್ರಧಾರಿಗಳಿಗೆ ಸ್ಥಾನ ಇಲ್ಲದೆ, ಹಾಸ್ಯಕ್ಕೆಂದೇ ಪ್ರತ್ಯೇಕ ಟ್ರ್ಯಾಕ್‌ಗಳನ್ನು ರಚಿಸುವ ಚಾಳಿ ಬೆಳೆಯಿತು. ಅಭಿರುಚಿ ಕೆಡುತ್ತಾ ಬಂದಂತೆ, ಹಾಸ್ಯ ದೃಶ್ಯ ಎಂದರೆ ಅಶ್ಲೀಲ ಸಂಭಾಷಣೆಯೇ ಎಂಬಂತಾಯಿತು. ದ್ವಂದ್ವಾರ್ಥ ಸಂಭಾಷಣೆಗಳು ಒಂದೆರಡು ದಶಕಗಳ ಕಾಲ ಕನ್ನಡ ಸಿನಿಮಾಗಳನ್ನು ಆಳಿದ ಕಾಲವೂ ಒಂದಿತ್ತು.

ಈಗ ಶ್ಲೀಲ– ಅಶ್ಲೀಲಗಳ ನಡುವಣ ಗೆರೆ ತುಂಬಾ ತೆಳ್ಳಗಾಗಿದೆ. ಹಳೆಯ ಪೀಳಿಗೆಯವರಿಗೆ ಅಶ್ಲೀಲ ಎನ್ನಿಸಿದ್ದು, ಈಗಿನ ಪೀಳಿಗೆಗೆ 'ಅದೇನು ಮಹಾ' ಎನ್ನಿಸುತ್ತಿದೆ. ಸಿನಿಮಾದಲ್ಲೂ ಇದರದ್ದೇ ಪ್ರಭಾವ. ಹೇಗೂ ಈಗ ಅಜ್ಜ– ಅಜ್ಜಿ– ಅಪ್ಪ– ಅಮ್ಮ– ಮಕ್ಕಳು– ಮೊಮ್ಮಕ್ಕಳು ಸಂಸಾರಸಮೇತ ಸಿನಿಮಾ ಮಂದಿರಗಳಿಗೆ ಭೇಟಿ ಕೊಡುವ ಪರಿಪಾಠ ನಿಂತೇಹೋಗಿದೆ. ಪ್ರತಿಯೊಬ್ಬರೂ ಏಕಾಂಗಿಯಾಗಿ ಅಥವಾ ಕದ್ದುಮುಚ್ಚಿ ಸಿನಿಮಾ ನೋಡುವುದು ಹೆಚ್ಚಾಗಿದೆ. ಹಾಗಾಗಿ ಸಿನಿಮಾಗಳಲ್ಲಿ ಹಾಸ್ಯದ ಹೆಸರಿನಲ್ಲಿ ಅಶ್ಲೀಲ ಸಂಭಾಷಣೆಗಳು ನೇರವಾಗಿ ದಾಳಿ ಇಡತೊಡಗಿವೆ. ಯಾವುದೇ ಮುಜುಗರವಿಲ್ಲದೆ ನೇರವಾಗಿ ಕಟಕಿಯಾಡುವ ಸಂಭಾಷಣಾ ಶೈಲಿಯ ಸಿನಿಮಾಗಳು ಶತದಿನೋತ್ಸವ ಆಚರಿಸಿದ್ದೂ ಇದೆ.

ಏಪ್ರಿಲ್ ತಿಂಗಳಲ್ಲಿ 'ಮೂರ್ಖರ ದಿನ' ಬರುತ್ತದೆ. ಅದೇ ಸಮಯದಲ್ಲಿ ಕಳೆದ ಎರಡು ವರ್ಷಗಳಿಂದ ಚುನಾವಣೆಯೂ ಬರುತ್ತಿದೆ! ಚುನಾವಣೆ ಎನ್ನುವುದು ಜನರನ್ನು ಮೂರ್ಖರಾಗಿಸಲು ರಾಜಕಾರಣಿಗಳಿಗೆ ಇರುವ ಬಹುದೊಡ್ಡ ಅವಕಾಶ. ಈ ಅವಕಾಶ ಏಪ್ರಿಲ್ ತಿಂಗಳಲ್ಲೇ ಬರುವುದು ಏನನ್ನು ಸೂಚಿಸುತ್ತದೆ? ಹಾಸ್ಯ ಮಾಡುವ ವಿಚಾರ ಇದಲ್ಲ; ಉಳ್ಳವರ ಮತ್ತು ಇಲ್ಲದವರ ನಡುವಣ ಕಂದರ ಅಗಾಧವಾಗಿ ಬೆಳೆದು, ಬಡವರ ಬದುಕೇ ಹಾಸ್ಯಾಸ್ಪದವಾಗಿರುವುದು ಇವತ್ತು ನಾವು ಕಾಣುತ್ತಿರುವ ಬಹುದೊಡ್ಡ ವ್ಯಂಗ್ಯ!

■ ಬಿ.ಎಂ.ಹನೀಫ್

